ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ೨೧ ನೇ ನವೆಂಬರ್ ೧೯೯೦ ಕಾರ್ತಿಕ ೩೦, ೧೯೧೨ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಮಾನ್ಯ ಎಂ. ಎಸ್. ಪಾಟೀಲ್‌ರವರೇ, ತಮ್ಮ ಜನ್ಮ ದಿನದ ಶುಭ ಸಂದರ್ಭದಲ್ಲಿ ಸದನದ ಪರವಾಗಿ ಹಾಗೂ ನನ್ನ ಪರವಾಗಿ ತಮಗೆ ಹಾರ್ದಿಕ ಶುಭಾಷಯಗಳು.

ಶ್ರೀ ಪಂಲ್ಲಾರಿಗೌಡ ಎಸ್. ಪಾಟೀಲ್.—ಧನ್ಯವಾದಗಳು

ಬೈಲಹೊಂಗಲದಲ್ಲಿ ೩೦ ಹಾಸಿಗೆಯುಳ್ಳ ಕಾಟೇಜ್ ಆಸ್ಪತ್ರೆಯ ನಿರ್ಮಾಣ

೨೨೮. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ ೩೦ ಹಾಸಿಗೆಗಳ ಕಾಟೇಜ್ ಹಾಸ್ಪಿಟಲ್ ಕಟ್ಟಡದ ಕೆಲಸವು ಸ್ಥಗಿತಗೊಂಡ ಸಂಗತಿ (ಏಪ್ರಿಲ್ ೧೯೯೦ ರಿಂದ) ಈಚೆಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಏಪ್ರಿಲ್ ೯೦ ರಿಂದ ಇಲ್ಲಿಯವರೆಗೆ ಈ ಕೆಲಸಕ್ಕೆ ಖರ್ಚಾದ ಹಣವೆಷ್ಟು ?

ಇ) ಪ್ರಸ್ತುತ ಸಾಲಿನಲ್ಲಿ ಈ ಕೆಲಸಕ್ಕೆ ಹಣವೆಷ್ಟು ಒದಗಿಸಲಾಗಿದೆ ?

ಶ್ರೀಮತಿ ನಾಗರತ್ನಮ್ಮ ಕೆ. ಎಸ್. (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆ).—

ಅ) –ಇಲ್ಲ– ಏಕೆಂದರೆ ರೂ. ೧.೩೭ ಹಣ ಖರ್ಚು ಮಾಡಿದೆ.

ಆ) ರೂ. ೧.೩೭ ಲಕ್ಷ

ಇ) ರೂ. ೧೫.೦೦ ಲಕ್ಷ

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಈ ಕಾಟೇಜ್ ಹಾಸ್ಪಿಟಲ್ ಕಟ್ಟಡವನ್ನು ಕಟ್ಟಲು ಆಡಳಿತಾತ್ಮಕ ಮಂಜೂರಾತಿಯನ್ನು ಯಾವ ದಿನಾಂಕದಂದು ನೀಡಲಾಯಿತು ಈ ಕಟ್ಟಡವನ್ನು ಎಷ್ಟು ದಿವಸಗಳ ಒಳಗಾಗಿ ಕಟ್ಟಬೇಕೆಂದು ನಿರ್ಧರಿಸಲಾಗಿತ್ತು ಮತ್ತು ಕಳೆದ ೯ ತಿಂಗಳಿಂದ ಈ ಕಟ್ಟಡದ ಕೆಲಸವು ಯಾವುದೇ ರೀತಿಯಿಂದ ಆಗದಿರುವುದಕ್ಕೆ ಕಾರಣವೇನು ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಈ ಕಟ್ಟಡದ ಕೆಲಸಕ್ಕೆ ದಿನಾಂಕ ೩೧–೩–೯೦ರ ಅಂತ್ಯದವರೆಗೆ ೧೪.೫೦ ಲಕ್ಷ ರೂಪಾಯಿ ಖರ್ಚಾಗಿದೆ. ಸದರಿ ಕಟ್ಟಡಕ್ಕೆ ಜಿಲ್ಲಾ ಪರಿಷತ್ತಿನವರು ೯೦–೯೧ ರವರೆಗೆ ೧೫ ಲಕ್ಷ ರೂಪಾಯಿ ಒದಗಿಸಿದ್ದಾರೆ. ಏಪ್ರಿಲ್ ೯೦ ರಿಂದ ಸೆಪ್ಟೆಂಬರ್‌ವರೆಗೆ ೧.೩೭ ಲಕ್ಷವನ್ನು ಖರ್ಚು ಮಾಡಿದ್ದಾರೆ. ಕಟ್ಟಡದ ಕೆಲಸ ಪೂರ್ತಿಯಾದ ತಕ್ಷಣ ನಾವು ಕಟ್ಟಡ ತೆಗೆದುಕೊಂಡು ಅದನ್ನು ಸರಿ ಮಾಡಿ ಕೊಡುತ್ತೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—೧೯೯೦-೯೧ರಲ್ಲಿ ೧.೩೭ ಲಕ್ಷ ರೂಪಾಯಿ ನೀಡಲಾಗಿದೆ ಎಂದು ಹೇಳುತ್ತಿದ್ದೀರಿ. ಹೋದವರ್ಷದ ಬ್ಯಾಲೆನ್ಸ್ ಏನು ಇತ್ತು, ಅದನ್ನು ಪೇಮೆಂಟ್ ಮಾಡಿದ್ದಾರೆ. ಆದರೆ ಅಲ್ಲಿ ಕೆಲಸ ಮಾತ್ರ ಆಗಿರುತ್ತಿಲ್ಲ. ಜಿಲ್ಲಾ ಪರಿಷತ್ತಿನ ವತಿಯಿಂದ ಇಂತಹ ದೊಡ್ಡ ಕಟ್ಟಡವನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಕೆಲಸ ಈ ರೀತಿ ನಿಧಾನ ಆದರೆ ೪ ಲಕ್ಷ ರೂಪಾಯಿ ಹೆಚ್ಚಾಲ್ಲಿ ಕೊಡಬೇಕಾಗುತ್ತದೆ ಜಿಲ್ಲಾ ಪರಿಷತ್ತಿನ ತಪ್ಪಿನಿಂದ ಈ ಕೆಲಸ ಹಾಗೇ ನಿಂತಿದೆ. ದಯಮಾಡಿ ಇದನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿ ಆದಷ್ಟು ಬೇಗನೆ ಕೆಲಸವನ್ನು ಮುಗಿಸಬೇಕು. ಇಲ್ಲವಾದಲ್ಲಿ ಸುಮಾರು ೪ ಲಕ್ಷ ರೂಪಾಯಿಯನ್ನು ಅನಾವಶ್ಯಕವಾಗಿ ಹೆಚ್ಚಿಗೆ ಖರ್ಚು ಮಾಡಬೇಕಾದಂತಹ ಪ್ರಸಂಗ ಸರಕಾರಕ್ಕೆ ಬರುತ್ತದೆ. ಜಿಲ್ಲಾ ಪರಿಷತ್‌ನವರು ಕೊಡುವ ೧೫ ಲಕ್ಷದಲ್ಲಿ ಎಲ್ಲಾ ಕೆಲಸ ಆಗುವುದಿಲ್ಲ. ದಯವಿಟ್ಟು ಲೋಕೋಪಯೋಗಿ ಇಲಾಖೆಗೆ ಇದನ್ನು ವಹಿಸಬೇಕೆಂದು ನನ್ನ ಸಲಹೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಮ್ಮ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

ಸರಕಾರಿ ವೈದ್ಯಾಧಿಕಾರಿಗಳು ಖಾಸಗಿ ವೈದ್ಯ ವೃತ್ತಿ ನಡೆಸುತ್ತಿರುವುದು

೭೯. ಶ್ರೀ ಎ. ಟಿ. ರಾಮಸ್ವಾಮಿ (ಆರಕಲಗೂಡು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಸೇವೆಯಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ ವೈದ್ಯರು ಅಧಿಕೃತವಾಗಿ ಖಾಸಗಿ ವೈದ್ಯ ವೃತ್ತಿ ನಡೆಸುತ್ತಿರುವುದರಿಂದ ರಾಜ್ಯ ಸರ್ಕಾರಿ ಆಸ್ಪತ್ರೆಗಳಿಗೆ ಹೋಗುತ್ತಿರುವ ರೋಗಿಗಳಿಗೆ ತೊಂದರೆಯಾಗುತ್ತಿರುವ ವಿಚಾರವು ನಿಜವಲ್ಲವೆ ?

ಆ) ಸದರಿ ಸರ್ಕಾರಿ ವೈದ್ಯರುಗಳ ಖಾಸಗಿ ವೈದ್ಯ ವೃತ್ತಿಯನ್ನು ನಿಲ್ಲಿಸುವುದಕ್ಕೆ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಇ) ಹಾಗಿಲ್ಲದಿದ್ದರೆ ಸರ್ಕಾರಿ ಆಸ್ಪತ್ರೆಗೆ ಶಂಕ್ರುಸೆಗಾಗಿ ಬಂದು ಬವಣೆ ಪಡುವ ರೋಗಿಗಳ ಕಷ್ಟ ತಪ್ಪಿಸಲು ಅಗತ್ಯವಾದ ಬೇರೆ ಕ್ರಮವನ್ನು ಸರ್ಕಾರವು ತೆಗೆದುಕೊಳ್ಳುವುದೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆ).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ಟಿ. ರಾಮಸ್ವಾಮಿ.—ಮಾನ್ಯ ಸಚಿವೆಯವರು ಒಳ್ಳೆಯ ಉತ್ತರ ಕೊಟ್ಟಿದ್ದಾರೆ ಅದಕ್ಕಾಗಿ ಅವರಿಗೆ ತಮ್ಮ ಮುಖಾಂತರ ಧನ್ಯವಾದಗಳನ್ನರ್ಪಿಸುತ್ತೇನೆ. ಸರಕಾರೀ ವೈದ್ಯರುಗಳು ಈ ಸದನಕ್ಕೆ ಮತ್ತು ಸಮಾಜಕ್ಕೆ ಗೌರವ ತರುವ ಹಾಗೆ ಖಾಸಗೀ ವೈದ್ಯ ವೃತ್ತಿಯನ್ನು ನಡೆಸುತ್ತಿದ್ದಾರೆ. ಆದರೆಲ್ಲಾ ಹೆಚ್ಚಾಗಿ ಯಾವ ವೈದ್ಯರನ್ನು ಗ್ರಾಮಾಂತರ ಪ್ರದೇಶಕ್ಕೆ ಹಾಕುತ್ತಾರೆ ಅವರುತೂ ಪಟ್ಟಣಗಳಲ್ಲಿಯೇ ನೆಲೆಸಿ ಅಲ್ಲಿಯೇ ಖಾಸಗೀ ವೈದ್ಯ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿರುವ ವೈದ್ಯರೂ ಕೂಡ ನಿಗದಿತ ಸಮಯಕ್ಕೆ ಗ್ರಾಮಾಂತರ ಪ್ರದೇಶಕ್ಕೆ ಹೋಗದೆ, ಪಟ್ಟಣದಲ್ಲಿಯೇ ಹೆಚ್ಚು ಸಮಯವನ್ನು ಕಳೆಯುತ್ತಾರೆ. ಇದರಿಂದಾಗಿ ಕಡುಬಡವರಿಗೆ ಚಿಕಿತ್ಸೆ ಸರಿಯಾಗಿ ದೊರೆಯುತ್ತಿಲ್ಲ, ಸರಕಾರಕ್ಕೆ ಈ ವಿಚಾರ ಗೊತ್ತಿಲ್ಲವೇ ? ಇದನ್ನು ತಪ್ಪಿಸುವುದಕ್ಕೆ ಏನಾದರೂ ಸರಕಾರ ಕ್ರಮ ಕೈಗೊಳ್ಳುತ್ತದೆಯೇ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವೇ ಕೆಲವು ವೈದ್ಯರುಗಳಿಗೆ ನೀವು ಪ್ರಾಕ್ಟೀಸ್ ಮಾಡಬಹುದೆಂದು ನಾವು ಅಪ್ಪಣೆ ಕೊಟ್ಟಿದ್ದೇವೆ. ಆದರೆ ಅವರಿಗೆ ಅವರು ತಮ್ಮ ಕೆಲಸದ ಸಮಯದಲ್ಲಿ ಹೊರಕ್ಕೆ ಹೋಗುತ್ತಾರೆಂದರೆ ಅದು ತಪ್ಪಾಗುತ್ತದೆ. ಅವರು ಹೊರಕ್ಕೆ ಆಗ ಹೋಗಬಾರದು. ಈ ವಿಚಾರದ ಬಗ್ಗೆ ನಾನು ಕೂಡ ಬಹಳ ಮಟ್ಟಿಗೆ ಮಾನಸ್ಸಿಗೆ ನೊಂದುಕೊಂಡಿದ್ದೆ-ನೆ. ಇದರ ಬಗ್ಗೆ ಪೂರ್ಣ ವಿಮರ್ಶೆ ಮಾಡುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ.

ಶ್ರೀ ಎ. ಟಿ. ರಾಮಸ್ವಾಮಿ.—ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ ಗ್ರಾಮಾಂತರ ಪ್ರದೇಶಕ್ಕಿಂತ ಹೆಚ್ಚು ಪಟ್ಟಣ ಪ್ರದೇಶದಲ್ಲಿ ಡಾಕ್ಟರ್ಸ್‌ಗಳು ಇರುತ್ತಾರೆ. ಅವರು ಖಾಸಗಿಯಾಗಿ ಕ್ಲಿನಿಕ್‌ಗಳನ್ನು ತೆಗೆದುಕೊಂಡು ತಮ್ಮ ವೃತ್ತಿಯನ್ನು ನಡೆಸಿಕೊಂಡಿರುತ್ತಾರೆ, ನಿಗದಿತ ವೇಳೆಯಲ್ಲಿ ಅವರು ಆಸ್ಪತ್ರೆಗೆ ಬರುವುದಿಲ್ಲ. ಇದರಿಂದಾಗಿ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ಕಟ್ಟು